Jai Kisan

UASB LIBRARY

Agri Newspaper Clippings

Monday 24-07-2023
Pg. 1

ಹಲಸಿನ ಹಣ್ಣಿನ ಮಾರಾಟ ಬಲು ಜೋರು!


ಔಷಧಿಯ ಗುಣ ಇರುವ ಹಲಸಿಗೆ ಬಹುಬೇಡಿಕೆ: ಪ್ರತಿವರ್ಷವೂ ಸುಗಮ ಮಾರುಕಟ್ಟೆ

ಟಿ.ನಾಗರಾಜ್

ತಾವರೆಕೆರೆ: ನಂದಗುಡಿ ಹೋಬಳಿ ತಾವರೆಕೆರೆ ಗ್ರಾಪಂ ಕಾಳಪ್ಪನಹಳ್ಳಿ ಮಂಚಪ್ಪನಹಳ್ಳಿ ಗಂಗಾಪುರ ತಾವರೆಕೆರೆ ಸುತ್ತಮುತ್ತಲೂ ಹಲಸಿನ ಮರಡನ್ನು ಹೊಂದಿದ್ದು ರುಚಿಯಾದ ಹಲಸಿನ ಹಣ್ಣನ್ನು ಮಾರಾಟಕ್ಕೆ ಇಟ್ಟಿದ್ದಾರೆ.

ಪ್ರತಿವರ್ಷದಂತೆ ಮೇ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗೆ ಸಿಗುವ ಹಲಸಿನ ಹಣ್ಣು ಮಾರಾಟ ಬಲು ಜೋರಾಗಿ ನಡೆಯುತ್ತದೆ. ಮರದಲ್ಲಿ ಹಣ್ಣಿನ ಗೊಂಚಲು ನೋಡಲು ಕಣ್ಣಿಗೆ ಹಬ್ಬದಂತೆ ಇರುತ್ತದೆ.

ಹಣ್ಣುಗಳ ರಾಜ ಎಂದೆ ಹೆಸರು ವಾಸಿಯಾಗಿರುವ ಹಲಸಿನ ಹಣ್ಣು. ಈ ಹಣ್ಣಿನಲ್ಲಿ ಹಲವಾರು ಬಗೆಯ ಒಳ್ಳೆಯ ಔಷಧಿ ಗುಣ ಲಕ್ಷಣವನ್ನು ಹೊಂದಿದೆ. ರಕ್ತದಲ್ಲಿನ ಸಕ್ಕರೆ ಅಂಶದ ಮಟ್ಟವನ್ನು ನಿರ್ವಹಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಧುಮೇಹ ಸಮಸ್ಯೆಯನ್ನು ಹೊಂದಿರುವವರು ಹಲಸಿನ ಹಣ್ಣಿನ ತೊಳೆಯನ್ನು ಯಾವುದೇ ಅನುಮಾವಿಲ್ಲದೆ ತಿನ್ನಬಹುದು ಏಕೆಂದರೆ, ಹಲಸಿನ ಹಣ್ಣು ಸಿಹಿ ಇದ್ದರೂ ಸಹ ಇದರಲ್ಲಿ ಗ್ಲೈಸೆಮಿಕ್ ಅಂಶ ತುಂಬಾ ಕಡಿಮೆಯಿದೆ ಜೊತೆಗೆ ನಾರಿನ ಅಂಶ ಹೆಚ್ಚಿರುವ



ದಿಗಂತ ವಿಶೇಷ

ಕಾರಣ ದೇಹದಲ್ಲಿ ಜೀರ್ಣ ಪ್ರಕ್ರಿಯೆಯನ್ನು ನಿಧಾನಗೊಳಿಸಿ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಸರಿಯಾಗಿ ಜೀರ್ಣವಾಗಿಸಿ ದೇಹಕ್ಕೆ ಲಾಭ ಉಂಟು ಮಾಡುತ್ತದೆ.

ಆದ್ದರಿಂದ ಮಧುಮೇಹ ರೋಗಿಗಳಿಗೆ ಹಲಸಿನ ಹಣ್ಣನ್ನು ಸೇವಿಸಬಹುದು. ದೇಹದಲ್ಲಿ ಸೋಂಕು ಹರಡದಂತೆ ರೋಗ ನಿರೋಧಕ ಶಕ್ತಿ ಹೆಚ್ಚಾಗಿ ಆರೋಗ್ಯ ಸುಧಾರಿಸುತ್ತದೆ. ಇದರ ಜೊತೆಗೆ ವಿಟಮಿನ್ ಎ ಮತ್ತು ವಿಟಮಿನ್ ಸಿ ಮೆಗ್ನೀಷಿಯಂ ಪೊಟ್ಯಾಷಿಯಂ ತಾಮ್ರ ಅಂಶಗಳು ಹೇರಳವಾಗಿರುವುದರಿಂದ ದೇಹದಲ್ಲಿ ರೋಗ ನಿರೋಧಕ ನಿರ್ವಹಣೆ ಮಾಡಲು ಸಾಕಷ್ಟು ಸಹಾಯ ಮಾಡುತ್ತದೆ.

> ವರ್ಷಕ್ಕೊಮ್ಮೆ ಹಲಸಿನ ಹಣ್ಣು ಸಿಗುತ್ತದೆ. ಇದರಲ್ಲಿ ಹೇರಳವಾದ ಪ್ರೋಟಿನ್ ಇರುವುದರಿಂದ ಔಷಧಿ ಗುಣ ಹೊಂದಿದೆ. ಕುಟುಂಬದವರೆಲ್ಲಾ ಮನೆಯಲ್ಲಿ ಸೇವಿಸುವುದರಿಂದ ಅನೇಕ ಕಾಯಿಲೆ ಹತ್ತಿರಕ್ಕೆ ಸುಳಿಯದಂತೆ ನೋಡಿಕೊಳ್ಳುತ್ತದೆ. ಆದ್ದರಿಂದ ಈ ತಿಂಗಳು ಬರುವುದಕ್ಕೆ ಕಾಯುತ್ತಿರುತ್ತೇವೆ.
> ■ ಕಾಳಪ್ಪನಹಳ್ಳಿ ಮಾರಕೊಂಡಪ್ಪ ಗ್ರಾಹಕ

> ಪ್ರತಿ ವರ್ಷ ಮೇ ನಿಂದ ಆಗಸ್ಟ್ ವರೆಗೆ ಕೋಲಾರ ಮುಳಬಾಗಿಲು ಹಾಗೂ ನೆರೆಯ ಆಂಧ್ರ ಪ್ರದೇಶ ಭಾಗದಿಂದ ಅತಿ ಹೆಚ್ಚಾಗಿ ಹಲಸಿನ ಹಣ್ಣು ತಂದು ಇಲ್ಲಿನ ವ್ಯಾಪಾರಿಗೆ ಮಾರಾಟ ಮಾಡುತ್ತಾರೆ. ಸಾವಿರಾರು ಹಣ್ಣುಗಳು ವ್ಯಾಪಾರವಾಗಿ ಗ್ರಾಹಕರ ಸಿಹಿ ಉಂಡು ಸಂತೋಷಪಡುತ್ತಾರೆ.
> ■ ಗಂಗಾಪುರ, ವೆಂಕಟೇಶ್ ವ್ಯಾಪಾರಸ್ಥ.



ಹಲಸಿನ ಹಣ್ಣಿನ ತೊಳೆಗಳಲ್ಲಿ ಹೇರಳವಾದ ಪ್ರೋಟಿನ್ ಅಂಶ ಇರುವ ಕಾರಣ ಸಾಮಾನ್ಯವಾಗಿ ಮಳೆ ಇಲ್ಲದ ಒಣ ಭೂಮಿಯಲ್ಲಿ ಎಲ್ಲಾ ಸಸ್ಯ ಬಳ್ಳಿ ಮತ್ತು ಮರಗಳು ಆನಾರೋಗ್ಯಕ್ಕೀಡಾಗಿ ಹಾನಿಯಾಗುತ್ತದೆ. ಆದರೆ, ಹಲಸಿನ ಮರ ಆಗುವುದಿಲ್ಲ. ಹಲಸಿನ ಮರ ಇರುವ ಜಾಗದಲ್ಲಿ ಹಲಸಿನ ಮರದ ಬೇರು ಎಲ್ಲಿಯವರೆಗೆ ಹಬ್ಬಿರುವುದೋ ಅಲ್ಲಿಯವರೆಗೂ ಮಣ್ಣು ಸಹ ಆರೋಗ್ಯವಾಗಿ ಇರುತ್ತದೆ ಎಂದು ಭೂ ತಜ್ಞರು ಹೇಳುತ್ತಾರೆ. ಆದ್ದರಿಂದ ವಾತಾವರಣ ಏರುಪೇರು ಆದರೂ ಮರಗಳ ಹಣ್ಣುಗಳಲ್ಲಿ ಪೌಷ್ಟಿಕಾಂಶ ಕೊರತೆ ಇರುವುದಿಲ್ಲ.

24-07-2023
Hosadiganta Pg 08

ಭತ್ತ ಕೊರತೆ

■ ಬಾಸ್ಮತಿ ಹೊರತುಪಡಿಸಿ ಅಕ್ಕಿ ರಫ್ತಿಗೆ ನಿಷೇಧ ಹೇರಿದ ಭಾರತ

■ ಜಾಗತಿಕ ಮಾರುಕಟ್ಟೆ ಮೇಲಾಗುವ ಪರಿಣಾಮವೇನು?

ಕರ್ನಾಟಕದಲ್ಲಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಅನ್ನಭಾಗ್ಯಕ್ಕೆ ಹೆಚ್ಚುವರಿ ಅಕ್ಕಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿತ್ತು. ಈ ಹಿನ್ನೆಲೆ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದ್ದ ಕಾಂಗ್ರೆಸ್, ದೇಶದಲ್ಲಿ ಸಾಕಷ್ಟು ಅಕ್ಕಿ ಸಂಗ್ರಹವಿದೆ. ಆದರೆ, ರಾಜಕೀಯ ದ್ವೇಷದಿಂದ ಕೇಂದ್ರ ಸರ್ಕಾರ ಅಕ್ಕಿ ನೀಡಲು ನಿರಾಕರಿಸಿದೆ ಎಂದು ಆರೋಪಿಸಿತ್ತು. ಆದರೆ ಇದೀಗ ಭಾರತ ಸರ್ಕಾರ ಬಾಸ್ಮತಿ ಅಲ್ಲದ ಬಿಳಿ ಅಕ್ಕಿಯ ರಫ್ತು ನಿಷೇಧಿಸಿದೆ. ಅರೆ-ಗಿರಣಿ ಅಥವಾ ಸಂಪೂರ್ಣವಾಗಿ ಗಿರಣಿ ಮಾಡಿದ ಅಕ್ಕಿ, ಪಾಲಿಶ್ ಅಥವಾ ಮೆರುಗುಗೊಳಿಸದಿರುವ ಅಕ್ಕಿಯ ರಫ್ತನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದೆ. ಕರ್ನಾಟಕಕ್ಕೆ ಅಕ್ಕಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದ್ದೇಕೆ?, ಈಗ ಮಾಡಿರುವ ಅಕ್ಕಿ ರಫ್ತು ನಿಷೇಧದಿಂದ ಜಾಗತಿ ಮಾರುಕಟ್ಟೆಯ ಮೇಲಾಗುವ ಪರಿಣಾಮವೇನು? ಎಂಬುದರ ಮಾಹಿತಿ ಇಲ್ಲಿದೆ.

ಕರ್ನಾಟಕಕ್ಕೆ ಅಕ್ಕಿ ನಿರಾಕರಿಸಿದ್ದೇಕೆ?

ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ತಾವು ಘೋಷಿಸಿದ ಅನ್ನಭಾಗ್ಯ ಯೋಜನೆ ಜಾರಿಗಾಗಿ ಕಾಂಗ್ರೆಸ್ ಸರ್ಕಾರ, ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಹೆಚ್ಚುವರಿ 5 ಕೆಜಿ ಅಕ್ಕಿಯನ್ನು ನೀಡುವಂತೆ ಬೇಡಿಕೆ ಇಟ್ಟಿತ್ತು. ಆದರೆ ದೇಶಕ್ಕೆ ಸಾಕಾಗುವಷ್ಟು ಅಕ್ಕಿ ಸಂಗ್ರಹದಲ್ಲಿ ಕೊರತೆಯುಂಟಾಗಿದೆ. ಆಹಾರ ಭದ್ರತೆ ಹಿನ್ನೆಲೆ ಅಕ್ಕಿ ನೀಡಲು ಸಾಧ್ಯವಿಲ್ಲವೆಂದು ಕೇಂದ್ರ ಆಹಾರ ನಿಗಮ ಕರ್ನಾಟಕ ಸರ್ಕಾರದ ಪ್ರಸ್ತಾಪವನ್ನು ನಿರಾಕರಿಸಿತ್ತು.

ಕೇಂದ್ರದ ವಿರುದ್ಧ ಕೈ ಆರೋಪವೇನು?

ಬಿಪಿಎಲ್ ಕುಟುಂಬಗಳಿಗೆ ಹೆಚ್ಚುವರಿ 5 ಕೆಜಿ ಅಕ್ಕಿ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಆದರೆ, ಅಕ್ಕಿ ಕೊರತೆ ನೆಪವೊಡ್ಡಿ ಅಕ್ಕಿ ನೀಡಲು ನಿರಾಕರಿಸಿದೆ. ಅಕ್ಕಿ ನೀಡಿದರೆ ಕಾಂಗ್ರೆಸ್ ಸರ್ಕಾರಕ್ಕೆ ಉತ್ತಮ ಹೆಸರು ಬರುತ್ತದೆ ಎಂದು ಕೇಂದ್ರ ಬಿಜೆಪಿ ಸರ್ಕಾರ ಈ ರೀತಿಯ ಹುನ್ನಾರ ಮಾಡಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಯಗಳಿಸಿರುವುದು ಬಿಜೆಪಿಗೆ ಸಹಿಸಲಾಗುತ್ತಿಲ್ಲ. ಹೀಗಾಗಿ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುತ್ತಿಲ್ಲ ಎಂದು ಕಾಂಗ್ರೆಸ್ ಆರೋಪಿಸಿತ್ತು.

ಕರ್ನಾಟಕಕ್ಕೆ ಅಕ್ಕಿ ನಿರಾಕರಣೆ ಹಿಂದಿರುವ ಕಾರಣವೇನು?

ಅಕ್ಕಿ ಕೊರತೆ ಹಿನ್ನೆಲೆ ದೇಶದಲ್ಲಿ ಬೆಲೆ ಏರಿಕೆ

ಜುಲೈ 19ರ ಹೊತ್ತಿಗೆ ಪ್ರತಿ ಕೆಜಿ ಅಕ್ಕಿಗೆ ಸರಾಸರಿ 40.9 ರೂಪಾಯಿ ಹೆಚ್ಚಾಗಿದೆ. ಗ್ರಾಹಕ ವ್ಯವಹಾರಗಳ ಇಲಾಖೆ ಒಂದು ವರ್ಷದ ಹಿಂದೆ ಇದಕ್ಕಿಂತ ಶೇ.11.3 ರಷ್ಟು ಹೆಚ್ಚಾಗಿದೆ ಎಂದು ಡಿಜಿಎಫ್‌ಟಿ ತಿಳಿಸಿದೆ. ಮುಂದಿನ 10 ವರ್ಷದಲ್ಲಿಯೇ ಹಿಂದೆಂದೂ ಕಾಣದಷ್ಟು ಅಕ್ಕಿ ಬೆಲೆ ಹೆಚ್ಚಾಗಲಿರುವ ಸಂಭವವಿದೆ. ಹೀಗಾಗಿ ದೇಶದಲ್ಲಿ ಆಹಾರ ಭದ್ರತೆಯನ್ನು ಹೆಚ್ಚಿಸಲು ಹಾಗೂ ದೇಶಕ್ಕೆ ಸಾಕಾಗುವಷ್ಟು ಅಕ್ಕಿ ಸಂಗ್ರಹಿಸಲು ವಿದೇಶಗಳಿಗೆ ಅಕ್ಕಿ ರಫ್ತು ಮಾಡುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ.

ಅಕ್ಕಿ ರಫ್ತನ್ನು ನಿಷೇಧಿಸಿದ್ದೇಕೆ?

ಭಾರತದಲ್ಲಿ ಮಳೆ, ಪ್ರವಾಹ ಮತ್ತಿತರ ಕಾರಣದಿಂದ ಆಹಾರ ಬೆಳೆಗಳ ಫಸಲು ಬಹಳ ಕಡಿಮೆ ಆಗಿದೆ. ಕಳೆದ 12 ತಿಂಗಳಲ್ಲಿ ಆಹಾರ ವಸ್ತುಗಳ ಬೆಲೆ ಶೇ.10ಕ್ಕಿಂತಲೂ ಹೆಚ್ಚಾಗಿದೆ. ಜನಸಾಮಾನ್ಯರಿಗೆ ಬಹಳ ಅಗತ್ಯ ಇರುವ ಆಹಾರ ವಸ್ತುಗಳಲ್ಲಿ ಅಕ್ಕಿ ಪ್ರಮುಖವಾದುದು. ಇದರ ಲಭ್ಯತೆ ಕಡಿಮೆ ಆಗಬಾರದೆಂಬ ದೃಷ್ಟಿಯಿಂದ ಸರ್ಕಾರ ಅಕ್ಕಿ ರಫ್ತು ನಿಷೇಧಿಸಿದೆ. ಬಾಸ್ಮತಿ ವಿಧದ ಅಕ್ಕಿ ಹೊರತುಪಡಿಸಿ ಉಳಿದ ಸಾಧಾರಣ ಅಕ್ಕಿಯ ರಫ್ತು ಮಾಡುವಂತಿಲ್ಲ ಎಂದು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಈ ಕಾರಣಕ್ಕಾಗಿಯೇ ಕರ್ನಾಟಕದ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡಲು ನಿರಾಕರಿಸಲಾಗಿತ್ತು. ದೇಶದಲ್ಲಿರುವ ಕೊರತೆ ಬಗ್ಗೆ ತಿಳಿಸಿ ಹೇಳಿದರೂ, ಇದನ್ನು ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ, ಕೇಂದ್ರದಲ್ಲಿನ ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದದ್ದಲ್ಲದೇ, ರಾಜ್ಯವ್ಯಾಪಿ ಪ್ರತಿಭಟನೆ ಕೂಡ ಮಾಡಿತ್ತು.



ಜಾಗತಿಕ ಅಕ್ಕಿ ರಫ್ತಿನಲ್ಲಿ ಭಾರತದ್ದು ಶೇ.40 ಭಾಗ

ಜಾಗತಿಕವಾಗಿ ಒಟ್ಟು ಅಕ್ಕಿ ರಫ್ತಿನಲ್ಲಿ ಭಾರತದ ಪಾಲು ಶೇ.40ರಷ್ಟಿದೆ. 2022ರಲ್ಲಿ ಭಾರತ 22.2 ಮಿಲಿಯನ್ ಟನ್‌ಗಳಷ್ಟು ಅಕ್ಕಿಯನ್ನು ವಿವಿಧ ದೇಶಗಳಿಗೆ ರಫ್ತು ಮಾಡಿತ್ತು. ಆದರಲ್ಲಿ ಅರ್ಧದಷ್ಟು ಅಕ್ಕಿ ಬಾಸ್ಮತಿಯೇತರದ್ದು. ಭಾರತದ ಅಕ್ಕಿಯ ಮೇಲೆ ಅತಿಹೆಚ್ಚು ಅವಲಂಬಿತವಾಗಿರುವುದು ನೆರೆಯ ದೇಶಗಳಾದ ಬಾಂಗ್ಲಾದೇಶ ಮತ್ತು ನೇಪಾಳ. ಹಾಗೆಯೇ ಕ್ಯಾಮರೂನ್, ಡಿಜಿಬೋಟಿ, ಬೆನಿನ್, ಆಂಗೋಲಾ, ಗಿನಿಯಾ, ಐವರಿ ಕೋಸ್ಟ್, ಕೀನ್ಯಾ ಮೊದಲಾದ ದೇಶಗಳೂ ಕೂಡ ಭಾರತದಿಂದ ಬಾಸ್ಮತಿಯೇತರ ಅಕ್ಕಿಯನ್ನು ಹೆಚ್ಚು ಖರೀದಿಸುತ್ತವೆ.

ಅಮೆರಿಕ, ಕೆನಡಾದಲ್ಲಿ ಅಕ್ಕಿ ಖರೀದಿಗೆ ಮುಗಿಬಿದ್ದ ಜನ

ಉತ್ತರ ಅಮೆರಿಕ ಖಂಡದ ರಾಷ್ಟ್ರಗಳಾದ ಕೆನಡಾ ಮತ್ತು ಅಮೆರಿಕದಲ್ಲಿ ಅಕ್ಕಿಗೆ ಬಹಳ ಬೇಡಿಕೆ ಇದೆ. ಇದಕ್ಕೆ ಕಾರಣ ಈ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತೀಯ ಸಮುದಾಯದವರು. 2022–23ರ ವರ್ಷದಲ್ಲಿ ಉತ್ತರ ಅಮೆರಿಕದ ದೇಶಗಳು ಭಾರತದಿಂದ 64,330 ಟನ್ ಗಳಷ್ಟು ಬಾಸ್ಮತಿಯೇತರ ಅಕ್ಕಿ ಅಮದು ಮಾಡಿಕೊಂಡಿದ್ದವು. ಈಗ ಭಾರತ ಅಕ್ಕಿ ರಫ್ತು ನಿಷೇಧ ಮಾಡುತ್ತಿದ್ದಂತೆಯೇ ಅಮೆರಿಕ ಮತ್ತು ಕೆನಡಾದಲ್ಲಿ ಭಾರತೀಯ ಸಮುದಾಯದವರು ಅಕ್ಕಿ ಖರೀದಿಗೆ ಮುಗಿಬೀಳುತ್ತಿದ್ದಾರೆ.



24-07-2023
Hosadiganta Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU
ಸೋಮವಾರ
24 ಜುಲೈ 2023
24 JULY 2023
9c

ಜನಪ್ರಿಯ ಆಗುತ್ತಿದೆ ಬೆಣ್ಣೆಹಣ್ಣು

■ಸುನಿಲ್ ಪೊನ್ನೇಟಿ ಮಡಿಕೇರಿ

ಕೊಡಗು ಎಂದಾಕ್ಷಣ ಕಾಫಿ, ಕರಿಮೆಣಸು, ಏಲಕ್ಕಿ, ಕಿತ್ತಳೆ, ಜೇನು ಕಣ್ಮುಂದೆ ಬರುವುದು ಸಾಮಾನ್ಯ. ಆದರೀಗ ಮೆಕ್ಸಿಕೋ, ಗ್ವಾಟಿಮಾಲ, ವೆಸ್ಟ್ ಇಂಡೀಸ್ ಮೂಲದ ಅವೊಕಡೋ(ಬಟರ್‌ಫ್ರೂಟ್) ಕೂಡ ಕೊಡಗಿನದ್ದೇ ಹಣ್ಣು ಎನ್ನುವಷ್ಟರ ಮಟ್ಟಿಗೆ ಜಿಲ್ಲೆಯಲ್ಲಿ ಜನಪ್ರಿಯವಾಗುತ್ತಿದೆ. ಬೆಣ್ಣೆಹಣ್ಣು ಎಂದೇ ಸ್ಥಳೀಯವಾಗಿ ಕರೆಯಲ್ಪಡುವ ಈ 'ಬಟರ್‌ಫ್ರೂಟ್' ಬೆಳೆಯನ್ನು ಎಲ್ಲೆಡೆ ಪಸರಿಸುವ ಮೂಲಕ ರೈತರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡಲು ಚೆಟ್ಟಳ್ಳಿಯಲ್ಲಿರುವ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ ತನ್ನದೇ ಆದ ಕೊಡುಗೆ ನೀಡುತ್ತಿದೆ.

ಕೊಡಗಿನಲ್ಲಿ ಬಟರ್‌ಫ್ರೂಟ್ ಬ್ರಿಟಿಷರ ಮುಖಾಂತರವೇ ಪರಿಚಯ ಆಯಿತು. ವಾಣಿಜ್ಯ ಉದ್ದೇಶಕ್ಕೆ ಅಲ್ಲದಿದ್ದರೂ ಬಟರ್‌ಫ್ರೂಟ್ ಗಿಡಗಳಿಂದ ಕಾಫಿ ಗಿಡಗಳಿಗೆ ನೆರಳಾಗುತ್ತದೆ. ಹಣ್ಣುಗಳು ಮನೆ ಉಪಯೋಗ, ಬಂಧುಗಳಿಗೆ ಹಂಚಲು ಬೇಕಾಗುತ್ತದೆ ಎನ್ನುವ ಕಾರಣಕ್ಕೆ ಬೆಳೆಸಲಾಗುತ್ತಿತ್ತು. ಆದರೆ, 2005ರ ಸುಮಾರಿಗೆ ಅಮೆರಿಕ ಮೂಲದ ಹಾಸ್ ತಳಿ ಕೊಡಗಿಗೆ ಪರಿಚಯ ಆಯಿತು. ಈ ಹಣ್ಣಿನ ಬಳಕೆಯಿಂದ ಆಗುವ ಲಾಭಗಳ ಬಗ್ಗೆ ಹೆಚ್ಚು ಪ್ರಚಾರ ಆಗುತ್ತಿದ್ದಂತೆಯೇ ಮಾರುಕಟ್ಟೆಯಲ್ಲೂ ಬೇಡಿಕೆ ಸೃಷ್ಟಿಯಾಯಿತು. ಕೆಜಿಗೆ ಸುಮಾರು 200 ರೂ. ದರ ಇದೆ ಎನ್ನುವುದು ಗೊತ್ತಾಗುತ್ತಿದ್ದಂತೆಯೇ ಇದನ್ನು ಬೆಳೆಯುವವರ ಸಂಖ್ಯೆಯೂ ಜಾಸ್ತಿ ಆಯಿತು. ತೋಟಗಾರಿಕಾ ಸಂಶೋಧನಾ ಸಂಸ್ಥೆಗಳೂ ಮತ್ತಷ್ಟು ಸಂಶೋಧನೆಗೆ ಮುಂದಾದವು. ನರ್ಸರಿಗಳೂ ಹುಟ್ಟಿಕೊಂಡವು. ದೊಡ್ಡ ಪ್ರಮಾಣದಲ್ಲಿ ಸಸ್ಯೋತ್ಪಾದನೆ ಶುರುವಾಯಿತು. ಇದೀಗ ಜಿಲ್ಲೆಯಲ್ಲಿ ಕಾಫಿ, ಕರಿಮೆಣಸು, ಏಲಕ್ಕಿ, ಕಿತ್ತಳೆ, ಜೇನು ಸಾಲಿಗೆ 'ಅವೊಕಡೋ' ಕೂಡ ಬಂದು ನಿಂತಿದೆ.

ಬೆಳೆಗಾರರ ಆಕರ್ಷಣೆ: ಬಟರ್‌ಫ್ರೂಟ್ ಬೆಳೆಯಲು ಸುಲಭ ಎನ್ನುವ ಕಾರಣಕ್ಕೆ ಈ ಬೆಳೆ ಜನಪ್ರಿಯ ಆಗುತ್ತಿದೆ. ಹಣ್ಣಿನ ಸಿಪ್ಪೆ ಕಹಿ ಇರುವುದರಿಂದ ಮಂಗಗಳು ಇದರ ಹತ್ತಿರ ಬರುವುದಿಲ್ಲ ಎನ್ನುವುದು ಪ್ರಮುಖ ಅಂಶ. ವರ್ಷದಲ್ಲಿ 2 ಬಾರಿ ಫಸಲು ಸಿಗುತ್ತದೆ. ನೀರು ಹೆಚ್ಚು ಬೇಕಿಲ್ಲ. ಕೀಟಗಳು ಆಷ್ಟಾಗಿ ಕಾಟ ಕೊಡುವುದಿಲ್ಲ. ಗೊಬ್ಬರವನ್ನೂ ಹಾಕಬೇಕಿಲ್ಲ. ಬೀಜದಿಂದಲೇ ಸಸ್ಯಾಭಿವೃದ್ಧಿ ಮಾಡಬಹುದು. ಕಸಿ ಗಿಡಗಳಾದರೆ ಬೇಗ ಫಲ ಕೊಡುತ್ತವೆ. ಒಂದು ದೊಡ್ಡ ಗಿಡ 100-150 ಹಣ್ಣುಗಳನ್ನು ಬಿಡಬಲ್ಲದು. ಹೂವುಗಳು ಜೇನುನೊಣಗಳಿಗೆ ಪ್ರಿಯವಾಗುವುದರಿಂದ ಜೇನುತುಪ್ಪ ಉತ್ಪಾದನೆಗೂ ಪ್ರಯೋಜನಕಾರಿ. ಎಷ್ಟು ಬಲಿತರೂ ಗಿಡದಲ್ಲಿ ಹಣ್ಣಾಗುವುದಿಲ್ಲ. ಎಷ್ಟು ಬೇಕೋ ಅಷ್ಟು ಕೀಳಬಹುದು. ಕಿತ್ತ ನಂತರವೂ ಹಣ್ಣಾಗಲು 2 ದಿನ ಬೇಕಾಗುತ್ತದೆ.

> **ಬೆಣ್ಣೆಹಣ್ಣುಗಳಲ್ಲಿ ಗುಣಮಟ್ಟದ ತಳಿಗಳನ್ನು ನಾವು ಸಂಶೋಧಿಸಿದ್ದೇವೆ. ಗಿಡಗಳಿಗೆ ಬಹಳ ಬೇಡಿಕೆ ಇದೆ. ಈ ವರ್ಷ ನಮ್ಮ ಕೇಂದ್ರದಿಂದ 50 ಸಾವಿರ ಗಿಡಗಳನ್ನು ರೈತರಿಗೆ ಪೂರೈಸಲಾಗಿದೆ. ವಿದೇಶಗಳಲ್ಲಿ ಇರುವಂತೆ ಮುಂದಿನ ದಿನಗಳಲ್ಲಿ ಈ ಹಣ್ಣನ್ನು ಆಹಾರಕ್ಕಾಗಿಯೂ ಬಳಸುವವರ ಪ್ರಮಾಣ ಹೆಚ್ಚಲಿದೆ. ಸೌಂದರ್ಯ ವರ್ಧಕಗಳ ತಯಾರಿಕೆಗೂ ಹೆಚ್ಚಿನ ಪ್ರಮಾಣದಲ್ಲಿ ಬಳಸುವುದರಿಂದ ಭವಿಷ್ಯದಲ್ಲಿ ಬೇಡಿಕೆ ಮತ್ತಷ್ಟು ಹೆಚ್ಚುತ್ತದೆ.**
>
> ಡಾ.ಬಿ.ಎಂ. ಮುರಳೀಧರ್
> ವಿಜ್ಞಾನಿ, ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ, ಚೆಟ್ಟಳ್ಳಿ



ಹಣ್ಣಿನಲ್ಲಿದೆ ಪೌಷ್ಟಿಕಾಂಶ: ಆಪರೂಪದ ಪೌಷ್ಟಿಕಾಂಶ ಭರಿತ ಮತ್ತು ಔಷಧೀಯ ಹಣ್ಣು ಎಂದು ಇದನ್ನು ಆಹಾರ ತಜ್ಞರು ಗುರುತಿಸುತ್ತಾರೆ. ಸಂಪೂರ್ಣ ಆಪಾಯರಹಿತ ಕೊಬ್ಬಿನಾಂಶ ಅಧಿಕ ಪ್ರಮಾಣದಲ್ಲಿ ಹೊಂದಿದ ಏಕೈಕ ತೋಟಗಾರಿಕಾ ಹಣ್ಣು ಇದಾಗಿದೆ. ಕರೊನಾದಂತಹ ಸಂದರ್ಭದಲ್ಲಿ ದೇಹದ ಸತ್ವ ಕಾಪಾಡಿಕೊಳ್ಳಲು ಅಗತ್ಯ ಪೌಷ್ಟಿಕಾಂಶ ಇದರಲ್ಲಿದೆ. ಭಾರತದಲ್ಲಿ ಕೇವಲ ಹಣ್ಣಾಗಿ ಮಾತ್ರ ಬಳಕೆ ಆಗುವ 'ಅವೊಕಡೋ' ವಿದೇಶದಲ್ಲಿ ಬೆಳಗಿನ ತಿಂಡಿಯಾಗಿ, ಊಟದ ಒಂದು ಭಾಗವಾಗಿ ಉಪಯೋಗ ಆಗುತ್ತದೆ. ಹಾಗಾಗಿಯೇ ಭವಿಷ್ಯದಲ್ಲೂ ಈ ಹಣ್ಣಿಗೆ ಹೆಚ್ಚಿನ ಬೇಡಿಕೆ ಬರುವ ನಿರೀಕ್ಷೆ ಹೊಂದಲಾಗಿದೆ.

ಹೆಚ್ಚುತ್ತಿದೆ ಬೆಳೆ ವಿಸ್ತೀರ್ಣ: ಬೆಣ್ಣೆಹಣ್ಣಿನ ಬಗ್ಗೆ ವಿಶೇಷ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಚೆಟ್ಟಳ್ಳಿಯ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದ ಮಾಹಿತಿ ಪ್ರಕಾರ ಕೊಡಗಿನಲ್ಲಿ ಅಂದಾಜು 500-1000 ಎಕರೆ ಪ್ರದೇಶದಲ್ಲಿ ಬಟರ್‌ಫ್ರೂಟ್ ಬೆಳೆಸಲಾಗುತ್ತಿದೆ. ಬಟರ್‌ಫ್ರೂಟ್ ಬೆಳೆಯುವ ಪ್ರದೇಶ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಮಾರುಕಟ್ಟೆಯೂ ವಿಸ್ತಾರವಾಗುತ್ತಿದ್ದು, ಬೇಡಿಕೆ ಕೂಡ ಜಾಸ್ತಿ ಆಗುತ್ತಿದೆ.

ಕೊಡಗಿನಿಂದ ಕಿತ್ತಳೆ ಕಾಣೆ ಬಟರ್‌ಫ್ರೂಟ್‌ಗೆ ಮನ್ನಣೆ

ಕಿತ್ತಳೆ ಎಂದ ಕೂಡಲೇ ನೆನಪಾಗುವುದು ಕೊಡಗು. ಇಲ್ಲಿನ ಕಿತ್ತಳೆಯ ವಿಶೇಷ ರುಚಿ, ಪರಿಮಳ ಬಹಳ ಹಿಂದಿನಿಂದಲೂ ಪ್ರಖ್ಯಾತಿ. ಎರಡು ಶತಮಾನದಷ್ಟು ಹಿಂದಿನಿಂದಲೂ ಇಲ್ಲಿ ಕಿತ್ತಳೆ ಬೆಳೆಯಲಾಗುತ್ತಿದೆ. ಆದರೆ, ಬದಲಾದ ಕಾಲಘಟ್ಟದಲ್ಲಿ ರೈತರಿಗೆ ಪ್ರಮುಖ ಆದಾಯದ ಮೂಲವಾಗಿದ್ದ ಕಿತ್ತಳೆ ಬೆಳೆಯುವ ಪ್ರದೇಶ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಇದೇ ವೇಳೆ ಬೆಣ್ಣೆಹಣ್ಣು (ಅವೊಕಡೋ) ಕೃಷಿ ಜಿಲ್ಲೆಯಲ್ಲಿ ಹೆಚ್ಚಾಗುತ್ತಿದೆ. ಅಲ್ಲದೆ, ರೈತರಿಗೆ ಇದು ಆರ್ಥಿಕ ಸದೃಢತೆ ತಂದುಕೊಟ್ಟಿದೆ. ಇದೀಗ ಬಟರ್ ಫ್ರೂಟ್ ಕೊಡಗಿನದ್ದೇ ಎನ್ನುವಷ್ಟರಮಟ್ಟಿಗೆ ವ್ಯಾಪಿಸಿಕೊಳ್ಳುತ್ತಿದೆ.

ಕಡಿಮೆಯಾಗುತ್ತಿದೆ ಕೊಡಗಿನ ಆರೆಂಜ್

ಕೊಡಗಿನಲ್ಲಿ ಕಾಫಿ ತೋಟಗಳ ವಿಸ್ತಾರ ಹೆಚ್ಚುತ್ತಿದ್ದಂತೆಯೇ ಕಿತ್ತಳೆ ಅವನತಿಯತ್ತ ಸರಿಯಲಾರಂಭಿಸಿದೆ. ಕೊಡಗಿನ ವಿಶೇಷ ಕಿತ್ತಳೆಗೆ ಭೌಗೋಳಿಕ ಸೂಚಕ ಸ್ಥಾನಮಾನವೂ ಸಿಕ್ಕಿದ್ದು, ಮೈಸೂರಿನ ವಿಳ್ಯದೆಲೆ, ನಂಜನಗೂಡಿನ ರಸಬಾಳೆಯಂತೆ ಕೊಡಗಿನ ಕಿತ್ತಳೆಯೂ ಕರ್ನಾಟಕದ ವೈಶಿಷ್ಟ್ಯವನ್ನು ಜಗತ್ತಿಗೆ ಸಾರಿದೆ.

ಕೃಷಿಗೆ ರಾಸಾಯನಿಕಗಳ ಸೋಂಕು ತಗುಲದಿದ್ದ ಆ ಕಾಲದಲ್ಲಿ ಕಿತ್ತಳೆ ಬೇಸಾಯ ಉನ್ನತ ಮಟ್ಟದಲ್ಲಿ ಇತ್ತು. ಮಣ್ಣು ಫಲವತ್ತಾಗಿ ಇದ್ದುದ್ದರಿಂದ ಕೀಟ, ರೋಗಗಳ ಹಾವಳಿ ಇರದೆ ಸಮೃದ್ಧವಾಗಿ ಬೆಳೆಯುತ್ತಿತ್ತು. ಕೇರಳ, ತಮಿಳುನಾಡು ಹಾಗೂ ಕರ್ನಾಟಕದ ಮಾರುಕಟ್ಟೆಯಲ್ಲಿ ಕೊಡಗಿನ ಕಿತ್ತಳೆಗೆ ಅಧಿಕ ಬೇಡಿಕೆ ಇತ್ತು. ಆದರೆ, ಕಾಫಿಗೆ ಉತ್ತಮ ಬೆಲೆ ಸಿಗಲಾರಂಭಿಸಿದಾಗ ಬೆಳೆಗಾರರು ಕಾಫಿಯನ್ನೇ ಪ್ರಮುಖ ಬೆಳೆ ಮಾಡಿಕೊಳ್ಳತೊಡಗಿದರು. ನೇರವಾಗಿ ಮತ್ತು ಎತ್ತರಕ್ಕೆ ಬೆಳೆಯುವ ಕಿತ್ತಳೆ ಗಿಡ ಕಾಫಿ ತೋಟದಲ್ಲಿ ನೆರಳಿನ ಗಿಡವಾಯಿತು. ಮುಖ್ಯ ಬೆಳೆಯಾಗಿದ್ದ ಕಿತ್ತಳೆ ಅಂತರ ಬೆಳೆ ಸ್ಥಾನಕ್ಕೆ ಇಳಿಯಿತು. ಕಾಫಿ ತೋಟಗಳಲ್ಲಿ ರಾಸಾಯನಿಕ ಬಳಕೆ ಸಾಮಾನ್ಯವಾಗುತ್ತಿದ್ದಂತೆ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಕಿತ್ತಳೆಗೆ ಮಾರಕವಾಯಿತು. ಕೊಡಗಿನ ಕಿತ್ತಳೆ ತನ್ನ ನೈಸರ್ಗಿಕ ಸಾಮರ್ಥ್ಯ ಕಳೆದುಕೊಳ್ಳಲು ಇದೂ ಕಾರಣವಾಯಿತು ಎಂದು ವಿಶ್ಲೇಷಿಸಲಾಗುತ್ತಿದೆ.

ಅಂತರ ಬೆಳೆಯಾಗಿ ಉಳಿದಿದೆ: ಕೊಡಗಿನಲ್ಲಿ ಸುಮಾರು 50 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆಯುತ್ತಿದ್ದ ಕಿತ್ತಳೆ ಈಗ ಅಂದಾಜು 7,492 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬೆಳೆಯಲಾಗುತ್ತಿದೆ. 60, 70ರ ದಶಕದಲ್ಲಿ ಮುಖ್ಯಬೆಳೆಯಾಗಿ ಮೆರೆದಿದ್ದ ಕೊಡಗಿನ ಕಿತ್ತಳೆ ಈಗ ಕಾಫಿ, ಕರಿ ಮೆಣಸಿನ ತೋಟದಲ್ಲಿ ಅಂತರ ಬೆಳೆಯಾಗಿ ಉಳಿದುಕೊಂಡಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕೊಡಗಿನ ಕಿತ್ತಳೆಯ ಹಳೆಯ ತೋಟಗಳ ಪುನಶ್ಚೇತನ ಕೆಲಸವೂ ನಡೆದಿದೆ. ರೋಗರಹಿತ ಕಸಿ ಗಿಡಗಳನ್ನು ರೈತರಿಗೆ ವಿತರಿಸುವ ಮೂಲಕ ಕಿತ್ತಳೆ ಬೆಳೆಯುವ ಪ್ರದೇಶ ವಿಸ್ತರಿಸುವ ಕೆಲಸವೂ ಆಗುತ್ತಿದೆ. ಹೊಸದಾಗಿ ಸುಮಾರು 7,376 ಎಕರೆ ಪ್ರದೇಶದಲ್ಲಿ ಕಿತ್ತಳೆ ಬೆಳೆಯಲು ತೋಟಗಾರಿಕೆ ಇಲಾಖೆ ಪ್ರಯತ್ನ ನಡೆಸಿದೆ.

ಉಪಬೆಳೆಯಾದ ಆರೆಂಜ್: ಕೊಡಗಿನಲ್ಲಿ ಕೆಲವರು ಸ್ವಯಂ ಆಸಕ್ತಿಯಿಂದ ಕಿತ್ತಳೆ ಬೆಳೆಯುತ್ತಿದ್ದಾರೆ. ಮುಖ್ಯ ಬೆಳೆಯಾಗಿ ಬೆಳೆಯುವ ಧೈರ್ಯ ಮಾಡುತ್ತಿಲ್ಲವಾದರೂ ಕಾಫಿ ತೋಟದಲ್ಲಿ ಉಪಬೆಳೆಯಾಗಿ ಬೆಳೆಯುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಇಂಥವರಲ್ಲಿ ಮಡಿಕೇರಿ ತಾಲೂಕು ದೇವಸ್ತೂರು ಗ್ರಾಮದ ಚಾಮೇರ ಸಂತು ಜಗನ್ ಕೂಡ ಒಬ್ಬರು. ಇವರಿಗೆ ಇರುವ 8 ಎಕರೆ ಜಾಗದಲ್ಲಿ ಸುಮಾರು 300 ಕಿತ್ತಳೆ ಗಿಡಗಳನ್ನು ನೆಟ್ಟಿದ್ದಾರೆ. 15 ವರ್ಷಗಳ ಹಿಂದೆ ನೆಟ್ಟ ಗಿಡಗಳು 5 ವರ್ಷದಿಂದ ಸಮೃದ್ಧವಾಗಿ ಫಸಲು ಕೊಡುತ್ತಿವೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಫಸಲು ಕಡಿಮೆ ಎನ್ನುತ್ತಾರೆ ಸಂತು.

ಕಿತ್ತಳೆ ವರ್ಷಕ್ಕೆರಡು ಬೆಳೆ ಬರುತ್ತದೆ. ಜೂನ್-ಜುಲೈ ಮತ್ತು ಆಕ್ಟೋಬರ್-ನವೆಂಬರ್‌ನಲ್ಲಿ ಫಲ ಸಿಗುತ್ತದೆ. ಜೂನ್ ತಿಂಗಳಲ್ಲಿ ಸಾಮಾನ್ಯವಾಗಿ ಉತ್ತಮ ಫಲ ಇರುತ್ತದೆ. ದರವೂ ಚೆನ್ನಾಗಿರುತ್ತದೆ. ಆಕ್ಟೋಬರ್‌ನಲ್ಲಿ ನಾಗಪುರ ಕಿತ್ತಳೆ ಮಾರುಕಟ್ಟೆಗೆ ಬಂದು ಕೊಡಗಿನ ಕಿತ್ತಳೆಗೆ ಪೈಪೋಟಿ ನೀಡುತ್ತದೆ.

> **ಸಾಮಾನ್ಯವಾಗಿ ಪ್ರತಿ ವರ್ಷ ಸುಮಾರು 1 ಸಾವಿರ ಕೆಜಿ ಕಿತ್ತಳೆ ಕಟಾವು ಮಾಡುತ್ತಿದ್ದೆವು. ಈ ಬಾರಿ ಕೇವಲ 600 ಕೆಜಿ ಸಿಕ್ಕಿದೆ. ಕೆಜಿಗೆ 30 ರೂ. ರೀತಿಯಲ್ಲಿ ವ್ಯಾಪಾರಿಗಳಿಗೆ ಮಾರಾಟ ಮಾಡಲಾಗಿದೆ. ನಾವೇ ಸ್ವತಃ ಗಿಡಗಳನ್ನು ಬೆಳೆಸಿ ನಾಟಿ ಮಾಡಿದ್ದೇವೆ. ಕೊಡಗಿನ ಕಿತ್ತಳೆಯನ್ನೇ ಬೆಳೆಸುತ್ತಿದ್ದೇವೆ. ತೋಟ ಇನ್ನಷ್ಟು ವಿಸ್ತರಿಸುವ ಗುರಿ ಇದೆ.**
>
> ಚಾಮೇರ ಸಂತು ಜಗನ್ ಕಿತ್ತಳೆ ಬೆಳೆಗಾರ, ದೇವಸ್ತೂರು

> **ಕೊಡಗಿನಲ್ಲಿ ಕಿತ್ತಳೆ ಬೆಳೆ ಪುನಶ್ಚೇತನಕ್ಕೆ ತೋಟಗಾರಿಕೆ ಇಲಾಖೆ ನೆರವು ಕೊಡುತ್ತಿದೆ. ಹಳೆಯ ತೋಟದಲ್ಲಿ ಹೊಸ ಗಿಡಗಳನ್ನು ನೆಡಲು ಇಲಾಖೆಯಿಂದ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಸಹಾಯಧನ ಕೊಡಲಾಗುತ್ತಿದೆ. ಪ್ರತಿವರ್ಷ 50 ಸಾವಿರ ಗಿಡಗಳನ್ನು ಬೆಳೆದು ರೈತರಿಗೆ ನೀಡಲಾಗುತ್ತಿದೆ. ಈ ಗಿಡಗಳನ್ನು ಮಾರಾಟ ಮತ್ತು ವಿವಿಧ ಯೋಜನೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.**
>
> ಸಿ.ಎಂ.ಪ್ರಮೋದ್ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕ, ಕೊಡಗು



ತಮ್ಮ ತೋಟದಲ್ಲಿ ಬೆಳೆದ ಕಿತ್ತಳೆಯೊಂದಿಗೆ ಚಾಮೇರ ಸಂತು ಜಗನ್

ವಿ ರೈತ ಮಿತ್ರ

■ಜಾಯಿಕಾಯಿ ಉಪಯೋಗಗಳು, ಸೂಕ್ತ ತಳಿ ಮತ್ತು ನಾಟಿ ಕ್ರಮಗಳ ಬಗ್ಗೆ ತಿಳಿಸಿ.

ಪ್ರಸನ್ನ ತುಮಕೂರು

– ಜಾಯಿಕಾಯಿ ಎರಡು ರೀತಿಯ ಮಸಾಲೆ ವಸ್ತುಗಳನ್ನು ಕೊಡುತ್ತದೆ. ಒಂದು ಒಣಗಿರುವ ಬೀಜವಾದ ಜಾಯಿಕಾಯಿ, ಮತ್ತೊಂದು ಒಣಗಿರುವ ಜಾಪತ್ರೆ. ಇದನ್ನು ಆಡುಗೆಗಾಗಿ ಮತ್ತು ಸುವಾಸನೆ ಕೊಡುವ ವಸ್ತುವಾಗಿ ಉಪಯೋಗಿಸುತ್ತಾರೆ. ಅಲ್ಲದೆ, ಉಷ್ಣಿನಕಾಯಿ, ಜೆಲ್ಲಿ ತಯಾರಿಕೆಯಲ್ಲಿ ಹಾಗೂ ಜೀರ್ಣತೆ ಮತ್ತು ಪ್ರಚೋದಕವಾಗಿ ಔಷಧದಲ್ಲಿ ಉಪಯೋಗಿಸುತ್ತಾರೆ.

ತಳಿಗಳು: ಕೊಂಕಣ ಸುಗಂಧ, ವಿಶ್ವಶ್ರೀ, ಕೇರಳಶ್ರೀ ಇತ್ಯಾದಿ.

ಮಣ್ಣು: ಇದನ್ನು ಬೆಳೆಯಲು ಹೆಚ್ಚು ಸಾವಯವ ಪದಾರ್ಥಗಳಿಂದ ಕೂಡಿದ ಜೇಡಿಗೋಡು, ಮರಳುಗೋಡು ಅಥವಾ ಜಂಬಿಟ್ಟಿಗೆ ಮಣ್ಣು ಸೂಕ್ತ. ಆದರೆ, ಆತಿಯಾಗಿ ಒಣಗುವ ಹಾಗೂ ಜೌಗು ಮಣ್ಣುಗಳು ಸೂಕ್ತವಲ್ಲ.

ನಾಟಿ ಕಾಲ: ಜೂನ್-ಜುಲೈ ತಿಂಗಳು(ಮುಂಗಾರು) ನಾಟಿ ಮಾಡಲು ಸೂಕ್ತ.

ನಾಟಿ ಕ್ರಮಗಳು: ಬೀಜದಿಂದ ಹಾಗೂ ಕಸಿ ವಿಧಾನದಿಂದ ಸಸ್ಯಾಭಿವೃದ್ಧಿ ಮಾಡುತ್ತಾರೆ. ಆದರೆ, ನಾಟಿಗೆ ಕಸಿಗಿಡಗಳನ್ನು ಬಳಸುವುದು ಸೂಕ್ತ. ಜಾಯಿಕಾಯಿ ಗಿಡಗಳ ಪ್ರಾರಂಭಿಕ ಬೆಳವಣಿಗೆಗೆ ನೆರಳು ಬೇಕಾಗಿದ್ದು, ಇದನ್ನು ಆಡಕೆ ಹಾಗೂ ತೆಂಗು ಬೆಳೆಯಲ್ಲಿ ಮಿಶ್ರಬೆಳೆಯಾಗಿ ಬೆಳೆಯಬಹುದು. ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ 25ಗಿ 25 ಅಡಿ ಅಂತರದಲ್ಲಿ 3 ಗಿ 3 ಗಿ 3 ಅಡಿ ಗಾತ್ರದ ಗುಂಡಿಗಳನ್ನು ತೆಗೆದು ಪ್ರತಿ ಗುಂಡಿಗೆ ತಳಭಾಗದಲ್ಲಿ ಮೇಲ್ಮಣ್ಣು, 25-30 ಕಿ.ಗ್ರಾಂ ಕೊಳೆತ ಕೊಟ್ಟಿಗೆ ಗೊಬ್ಬರ ಮತ್ತು 1.0 ಕಿ.ಗ್ರಾಂ ಬೇವು / ಹೊಂಗೆ ಹಿಂಡಿ ಮಿಶ್ರಣವನ್ನು ಸೀಡಿ ಸಸಿ ನಾಟಿ ಮಾಡಬೇಕು. ಕಸಿಗಿಡಗಳನ್ನು ನಾಟಿ ಮಾಡುವಾಗ ಪ್ರತಿ 20 ಹಣ್ಣು ಗಿಡಗಳಿಗೆ 1 ಗಂಡು ಗಿಡವನ್ನು ನಾಟಿ ಮಾಡಬೇಕು.

ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು



■ಚವಳಿಕಾಯಿ ಬೆಳೆಯಲ್ಲಿ ಸಸ್ಯಹೇನು ಹೆಚ್ಚಾಗುತ್ತಿದ್ದು, ನಿಯಂತ್ರಿಸುವುದು ಹೇಗೆ?

ರಾಮಚಂದ್ರ ಹೊಸಕೋಟೆ

– ಸಸ್ಯಹೇನುಗಳು ಎಲೆಗಳ ಕೆಳಭಾಗ, ಎಳೆಯ ರೆಂಬೆ ಮತ್ತು ಕಾಯಿಗಳಿಂದ ರಸ ಹೀರುತ್ತವೆ. ಬಾಧೆಗೊಳಗಾದ ಗಿಡಗಳು ಒಣಗುತ್ತವೆ ಹಾಗೂ ಕಪ್ಪು ಬೂಷ್ಟ್ ಬೆಳವಣಿಗೆ ಆಗುತ್ತದೆ.

ನಿರ್ವಹಣೆ: ಹೇನು ಕಂಡು ಬಂದಾಗ ಪ್ರತಿ ಲೀಟರ್ ನೀರಿಗೆ 1.5 ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಅಥವಾ 1 ಗ್ರಾಂ ಅಸಿಫೇಟ್ ಶೇ. 50 + ಇಮಿಡಾಕ್ಲೋಪ್ರಿಡ್ ಶೇ.1.8 ಎಸ್. ಪಿ. ಅನ್ನು ಬೆರೆಸಿ ಸಿಂಪಡಣೆ ಮಾಡಬೇಕು. ಬಾಧೆ ಕಂಡು ಬಂದಲ್ಲಿ ಎರಡು ವಾರಕ್ಕೊಮ್ಮೆ ಇದೇ ಸಿಂಪಡಣೆಯನ್ನು ಪುನರಾವರ್ತಿಸಬೇಕು.

ಪ್ರಿಯಾಂಕಾ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

24-07-2023
Ind Exp
Pg 07

Farm insurance premium up, but claim settlements on steep decline

JITENDRA CHOUBEY @ New Delhi

AGRICULTURE insurance companies are raking in huge profits as claims paid by these companies have been consistently dipping in the past few years. In 2022, the gross premium-to-claim settlement ratio was reduced to 21 per cent.

The latest data tabled in the Parliament by Union Minister for Farmers' Welfare, Narendra Singh Tomar, shows that agriculture insurance premium has been going up while claims payment is down, under the Pradhan Mantri Fasal Bima Yojana, the flagship agriculture insurance programme launched in 2016 for farmers to insure their yield loss.

In 2019-20, the ratio of gross premium-to-claims paid to farmers was 84 per cent, which reduced to 66 per cent in 2020-21, 60 per cent in 2021-22 and 21 per cent in 2022-23. In the first three years of the programme's launch, the gross premium collection to payment of claims was high. It led to many private firms leaving the scheme. Later, most of them joined again.

Every year, farmers protest over non-payment or delayed payment of claims across the country. There has been a slight decrease in the premium collection since 2019-20, but registered a drastic decline in claims payment.

The consistent decline in payment of farmers' claims doesn't augur well with sector experts. "There is a structural flaw in the programme. These insurance companies do business with banks that provide loans to farmers. Banks directly transfer premiums to companies. There is no connection between farmers and insurance companies," said activist Ramandeep Singh Mann, who protests on behalf of farmers.

"The ground reality is that farmers who face crop loss due to inclement weather is clueless about the contact person to report their losses within 72 hours as per rule," said Mann.

The Centre has acknowledged the widespread complaints from farmers against insurance companies.

Moreover, there are disputes between insurance firms and state governments on discrepancies in yield data, delay in providing state government's share of funds, non-deployment of sufficient personnel by insurance companies, etc.

"We are rectifying it," said a senior PMFBY official.

DATA SPEAKS

Year	Gross Premium (in Rs crore)	Claims Paid (in Rs crore)
2016-17	21,949.87	16,826.75

ಬಾಳೆಗೆ ಒಂದೇ ಗೊನೆ, ರಾಗಿಗೆ ಒಂದೇ ತೆನೆ! ಎಂಬ ಮಾತಿನಂತೆ ಬಾಳೆಯು ನಮ್ಮ ಬದುಕಿನುದ್ದಕ್ಕೂ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧ ಹೊಂದಿದೆ.



ವರ್ಷವೂದ್ದಕ್ಕೂ ಹೂ ಬಿಟ್ಟು, ಹಣ್ಣು ಕೊಡುವ ಗಿಡವೆಂದರೆ ಅದು ಬಾಳೆಗಿಡ. ಬಾಳೆಹಣ್ಣು ಮಾತ್ರವಲ್ಲ, ಬಾಳೆಗಿಡದ ಪ್ರತಿಯೊಂದು ಭಾಗವೂ ಉಪಯುಕ್ತವಾದುದು. ಕಣ್ಣೀರಿನ ಹನಿ ಆಕಾರದ, ಕೆಂಪು ಬಣ್ಣದ ನೇರಳೆ ಬಣ್ಣದಿಂದ ಕಾಣುವ ಹೂವು ಬಾಳೆಹಣ್ಣಿನ ಗುಂಪಿನ ಕೊನೆಯಲ್ಲಿ ಬೆಳೆಯುತ್ತದೆ. ಅದನ್ನು ಬನಾನಾ ಬ್ಲಾಸಮ್, ಬನಾನಾ ಹಾರ್ಟ್, ಲಫು-ಥಾರೋ, ಬಾಳೆ ಹೂ, ಬಾಳೆ ಹೃದಯ, ಎಂದು ಬೇರೆ ಬೇರೆ ಹೆಸರಿನಲ್ಲಿ ಕರೆಯಲಾಗುತ್ತದೆ. ಬಹುಪಯೋಗಿ ಬಾಳೆ ಹೂವು ಸ್ತ್ರೀಯರ ಪಾಲಿಗಂತೂ ಸಂಜೀವಿನಿ.

ಪೌಷ್ಟಿಕಾಂಶದ ಪ್ರಮಾಣ

100 ಗ್ರಾಂ ಹೂವಿನಲ್ಲಿರುವ ಪೌಷ್ಟಿಕಾಂಶದ ಮೌಲ್ಯ - ಕ್ಯಾಲೋರಿಗಳು - 51 ಕೆ.ಸಿ.ಎಲ್ ಫೈಬರ್ - 5.7 ಗ್ರಾಂ, ಕಬ್ಬಿಣ - 56.4 ಮಿಗ್ರಾಂ, ಮೆಗ್ನೀಸಿಯಮ್ - 48.7 ಮಿಗ್ರಾಂ, ಪ್ರೋಟೀನ್ - 1.6 ಗ್ರಾಂ, ಕೊಬ್ಬು - 0.6 ಗ್ರಾಂ, ಕಾರ್ಬೋಹೈಡ್ರೇಟ್ - 9.9 ಗ್ರಾಂ ಕ್ಯಾಲ್ಸಿಯಂ - 56 ಮಿಗ್ರಾಂ, ರಂಜಕ - 73.3 ಮಿಗ್ರಾಂ, ತಾಮ್ರ - 13 ಮಿಗ್ರಾಂ, ಪೊಟ್ಯಾಸಿಯಮ್ - 553.3 ಮಿಗ್ರಾಂ ವಿಟಮಿನ್ ಇ - 1.07 ಮಿಗ್ರಾಂ.

ಸ್ತ್ರೀಯ ಸ್ವಾಸ್ಥ್ಯಕ್ಕೆ ಬಾಳೆ ಹೃದಯ



ಆಹಾರವೇ ವೈದ್ಯ

• ಸೌಮ್ಯ ಸನತ್

ಔಷಧೀಯ ಗುಣಗಳ ಆಗರ

• ಬಾಳೆ ಹೂವು ಎಥೆನಾಲ್ ಅಂಶಹೊಂದಿದ್ದು ನಮ್ಮ ದೇಹಕ್ಕೆ ಅತೀ ಹೆಚ್ಚು ಹಾನಿ ಉಂಟು ಮಾಡುವಂತಹ ಬ್ಯಾಸಿಲಸ್ ಸಬ್ಟಾಲಿಸ್, ಬ್ಯಾಸಿಲಸ್ ಸೆರಿಯಸ್ ಮತ್ತು ಎಸ್ಚೆರಿಚಿಯಾ ಕೋಲಿಯಂತಹ ಬ್ಯಾಕ್ಟೀರಿಯಾ ದಾಳಿಯನ್ನು ತಡೆಯುತ್ತದೆ.

• ಬೇಯಿಸಿದ ಬಾಳೆ ಹೂವು ಮಹಿಳೆಯರ ಮಾಸಿಕ ಹೊಟ್ಟೆ ನೋವನ್ನು ಉಪಶಮನ ಮಾಡಲು ಸಹಾಯ ಮಾಡುತ್ತದೆ ಮತ್ತು ರಕ್ತಸ್ರಾವವನ್ನು ಕಡಿಮೆ ಮಾಡುತ್ತದೆ. ಮೊಸರು ಅಥವಾ ಮಜ್ಜಿಗೆಯೊಂದಿಗೆ ಇದನು ಸೇವಿಸಿದರೆ ದೇಹದಲ್ಲಿ ಪ್ರೊಜೆಸ್ಟರಾನ್ ಹಾರ್ಮೋನ್ ಹೆಚ್ಚುವುದು,

• ಅಧ್ಯಯನದ ಪ್ರಕಾರ, ಬಾಳೆಹಣ್ಣಿನ ಸಾರವು ಗ್ಲೂಕೋಸ್ ಹೀರಿಕೊಳ್ಳುವಿಕೆಯನ್ನು ಉತ್ತೇಜಿಸುತ್ತದೆ. ಹಾಗಾಗಿ ಮಧುಮೇಹಿಗಳು ಬಾಳೆ ಹೂಗಳನ್ನು ನಿಯಮಿತವಾಗಿ ಸೇವಿಸಿದಾಗ, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಕಡಿಮೆ ಮಾಡುತ್ತದಲ್ಲದೆ, ಹಿಮೋಗ್ಲೋಬಿನ್ ಅನ್ನು ಹೆಚ್ಚಿಸಿ ರಕ್ತಹೀನತೆಯನ್ನು ನಿವಾರಣೆ ಮಾಡುತ್ತದೆ.

• ಇದರಲ್ಲಿ ಫೈಬರ್ ಮತ್ತು ಪೋಷಕಾಂಶಗಳು ಸಮೃದ್ಧವಾಗಿರುವುದರಿಂದ, ಇದು ಹೊಟ್ಟೆಯ ಬೊಜ್ಜನ್ನು ಕರಗಿಸಿ ತೂಕ ಕಡಿಮೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸಲಾಡ್ ಮತ್ತು ಸೂಪ್ ಮಾಡಿಕೊಂಡು ಸೇವನೆ ಮಾಡಿದಾಗ ತೂಕ ಕಡಿಮೆಯಾಗುತ್ತದೆ.



• ಬಾಳೆ ಹೂವುಗಳಲ್ಲಿರುವ ಮೆಗ್ನೀಸಿಯಮ್ ಕಾರಣದಿಂದಾಗಿ ಆತಂಕ ಹಾಗೂ ಮನಸಿನ ಒತ್ತಡ ಕಡಿಮೆಯಾಗುತ್ತದೆ. ಖಿನ್ನತೆ ಹೋಗಲಾಡಿಸಿ ಮನಸ್ಸಿನ ಆರೋಗ್ಯವನ್ನು ಸುಧಾರಿಸುತ್ತದೆ.

• ಇದನ್ನು ಆಹಾರದಲ್ಲಿ ಸೇರಿಸುವುದರಿಂದ ಮೂತ್ರಪಿಂಡದ ಕಲ್ಲುಗಳನ್ನು ನೈಸರ್ಗಿಕ ಕರಗಿಸುವುದು. ಉರಿಯೂತ ಮತ್ತು ಮೂತ್ರದ ಸಮಸ್ಯೆಗಳ ಅಪಾಯವನ್ನು ತಪ್ಪಿಸಿ ಕಿಡ್ನಿ ಕಾರ್ಯವನ್ನು ಉತ್ತೇಜಿಸುತ್ತದೆ.

• ಹೃದಯಲ್ಲಿ ರಕ್ತ ಪರಿಚಲನೆ ಸರಾಗವಾಗಿ ನಡೆದು ಆಯಾಸ, ದಣಿವು, ಅನಿಯಮಿತ ಹೃದಯ ಬಡಿತ, ತೆಳು ಚರ್ಮ, ರಕ್ತಹೀನತೆಗೆ ಸಂಬಂಧಿಸಿದ ರೋಗಲಕ್ಷಣಗಳನ್ನು ಸುಧಾರಿಸುತ್ತದೆ.

• ಇದು ಕ್ಷಾರೀಯ ಆಹಾರವಾಗಿದ್ದು ಆಜೀರ್ಣ, ಹುಣ್ಣು ಮತ್ತು ನೋವಿನಿಂದ ಉಪಶಮನ ಮಾಡಲು ಸಹಕಾರಿ.

• ಆಹಾರದ ಫೈಬರ್ ಮತ್ತು ಇತರ ಪ್ರಮುಖ ಪೋಷಕಾಂಶಗಳನ್ನು ಹೊಂದಿರುವ ಬಾಳೆ ಹೂವುಗಳು ನೈಸರ್ಗಿಕ ವಿರೇಚಕವಾಗಿ ಕಾರ್ಯನಿರ್ವಹಿಸುತ್ತದೆ. ಕರುಳಿನ ಕಾರ್ಯಗಳನ್ನು ಕ್ರಮಬದ್ಧಗೊಳಿಸುತ್ತವೆ ಮತ್ತು ಮಲಬದ್ಧತೆಗೆ ಪರಿಣಾಮಕಾರಿ,

• ಹೈಡ್ರೇಟಿಂಗ್ ಸಂಯುಕ್ತಗಳಿಂದ ತುಂಬಿರುವ ಬಾಳೆ ಹೂವುಗಳನ್ನು ಕೈಗಳ ಶುಷ್ಕತೆ ಮತ್ತು ಮಂದತೆಗೆ ಚಿಕಿತ್ಸೆ ನೀಡುವ ಕೈ ಕ್ರೀಮ್ ಮತ್ತು ಬಾಡಿ ಲೋಷನ್ಗಳನ್ನು ತಯಾರಿಸಲು ಬಳಸಲಾಗುತ್ತದೆ.

• ಬಾಳೆ ಹೂವನ್ನು ಪುಡಿ ಮಾಡಿ ದೈನಂದಿನ ಫೇಸ್ ಕ್ರೀಮ್, ಮಾಯಿಶ್ಚರೈಸರ್ಸ ಇತ್ಯಾದಿಗಳೊಂದಿಗೆ ಬೆರೆಸಿ ಹಚ್ಚಿದಾಗ ಮುಖದಲ್ಲಿನ ಸುಕ್ಕುಗಳನ್ನು ಕಡಿಮೆ ಮಾಡುತ್ತದೆ.

• ಇದರ ಹೇರ್ ಪ್ಯಾಕ್ ಬಳಸುವುದರಿಂದ ತಲೆಹೊಟ್ಟು ಕಮ್ಮಿಯಾಗಿ ಕೂದಲು ಉದುರುವಿಕೆಗೆ ಕಡಿಮೆಯಾಗುತ್ತದೆ. ಇದಲ್ಲದೆ, ಬಾಳೆಹಣ್ಣಿನ ಹೇರ್ ಪ್ಯಾಕ್ ಕೂಡ ಕೂದಲಿನ ಬೆಳವಣಿಗೆಯನ್ನು ಸುಧಾರಿಸುತ್ತದೆ.

ಬಹಳಷ್ಟು ಜನರಿಗೆ ಇದರ ಬಳಕೆಯ ಬಗ್ಗೆ ತಿಳಿದಿಲ್ಲ. ಇದರ ಪ್ರಯೋಜನ ಪಡೆಯಲು, ಚಿಕ್ಕ ವಯಸ್ಸಿನಿಂದಲೇ ಮಕ್ಕಳನ್ನು ಬಾಳೆಹೂವನ್ನು ತಿನ್ನಲು ಪ್ರೋತ್ಸಾಹಿಸಬೇಕು. ಬಾಳೆ ಹೂವಿನ ಅಡುಗೆ ಮಾಡಲು ಕಲಿತರೆ, ನಾವು ಅದರೊಂದಿಗೆ ತುಂಬಾ ರುಚಿಕರವಾದ ಭಕ್ಷ್ಯಗಳನ್ನು ಮಾಡಬಹುದು.

ಮಮತೆಯ ಮಲ್ಲಿಕಾ ಮಾವು

ರೈತಗಾಥೆ

ಡಾ. ವಿಜಯ್ ಅಂಗಡಿ



ಹಣ್ಣುಗಳ ರಾಜ ಮಾವು ಎನ್ನುವುದಿದೆ. ನಿತ್ಯಹರಿದ್ವರ್ಣದ ಮಾವು ಮುಂಗಾರಿನ ಪೂರ್ವದಲ್ಲಿ ಹಣ್ಣನ್ನು ನೀಡುವುದಿದೆ. ಕೆಲವು ತಳಿಗಳಲ್ಲಿ ಹಿಂಗಾರಿನಲ್ಲೂ ಹಣ್ಣುಗಳು ಸಿಗುತ್ತವೆ. ಮಾವು ಬಿಸಿಲನ್ನು ಇಷ್ಟಪಡುವ, ಬಹುವಾರ್ಷಿಕ ಸ್ವಭಾವದ ಹಣ್ಣಿನ ಬೆಳೆ. ಈ ಬೆಳೆಗೆ ಅತಿಯಾದ ನೀರು ಬೇಕಾಗಿಲ್ಲ, ಶೀತವು ಇದಕ್ಕೆ ಆಗುವುದಿಲ್ಲ. ಮಳೆಯ ಕೊರತೆಯನ್ನು ಸಹಿಸಿಕೊಳ್ಳುವ ಮಾವು ನೆರಳು ಇರುವ ತೋಟಗಳಲ್ಲಿ ಅಷ್ಟೊಂದು ಚೆನ್ನಾಗಿ ಬೆಳೆಯಲಾರದು, ಹಣ್ಣುಗಳನ್ನು ನೀಡಲಾರದು. ದೇಶದಲ್ಲಿ ಮಾವಿನ ನೂರಾರು ತಳಿಗಳಿವೆ. ಇಂದಿಗೂ ನಾಟಿ ತಳಿಗಳನ್ನು ಮಾವಿನಲ್ಲಿ ಕಾಣಬಹುದು. ಮಾವಿನಲ್ಲಿ ತಳಿ ಸುಧಾರಣೆಯು ಉತ್ತಮವಾಗಿ ಸಾಗಿದೆ ಎನ್ನಬಹುದು. ಆಪೂಸು ಅಥವಾ ಬಾದಾಮಿ, ರಸಪುರಿ, ಮಲ್ಲಿಕಾ, ನೀಲಂ, ಬೆನೇಶಾನ್, ದೆಸೆರಿ, ತೋತಾಪುರಿ, ರಾಜಗೀರ, ಸಿಂಧು ಇತ್ಯಾದಿ ತಳಿಗಳಿವೆ. ಕರ್ನಾಟಕ ರಾಜ್ಯದ ಮಾವು ಬೆಳೆಯುವ ಪ್ರದೇಶಗಳಲ್ಲಿ ಬಾದಾಮಿ ತಳಿಯನ್ನೇ ಹೆಚ್ಚಾಗಿ ಕಾಣಬಹುದು. ಆದರೂ ರಸಪರಿ ತಳಿಯ ಹಣ್ಣುಗಳನ್ನು ಜನ ಇಷ್ಟಪಟ್ಟು ಸೇವನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ತಳಿಯ ಮರಗಳು ಹಲವಡೆ ಇವೆ. ತೋತಾಪುರಿ ಮತ್ತು ಬನೇಶಾನ್- ಈ ತಳಿಗಳ ಕಾಯಿಗಳು ಹೆಚ್ಚು ಹುಳಿಯಾಗಿರುವುದಿಲ್ಲ. ಉಳಿದಂತೆ ಎಲ್ಲಾ ತಳಿಗಳಲ್ಲೂ ಕಾಯಿಗಳು ಹುಳಿ ಹುಳಿಯಾಗಿಯೇ ಇರುತ್ತವೆ. ಹೃದಯಾಕಾರದ ಮಾವಿನ ಹಣ್ಣು ಹೃದಯದ ಆರೋಗ್ಯಕ್ಕೆ ಒಳ್ಳೆಯದೆಂದು ಹೇಳಲಾಗುತ್ತಿದೆ. ವಿಟಮಿನ್ ಎ ಮತ್ತು ಸಿ ಹಾಗೂ ಇತರೆ ಪೋಷಕಾಂಶಗಳು ಮಾವಿನಹಣ್ಣಿನಲ್ಲಿ ಇವೆ. ಈಗಲೂ ಕೆಲವು ನಾಟಿ ತಳಿಗಳ ಹಣ್ಣುಗಳನ್ನು ಸಿಪ್ಪೆ ಸಮೇತ ತಿನ್ನಬಹುದು. ಅಷ್ಟೊಂದು ರುಚಿ, ಸ್ವಾದ, ಸುವಾಸನೆ ಕೆಲವು ತಳಿಯ ಮಾವಿನ ಹಣ್ಣುಗಳಲ್ಲಿದೆ. ಬಾದಾಮಿ ಅಥವಾ ಆಪೂಸ್ ತಳಿಯನ್ನು ಮಾವಿನ ತಳಿಗಳಲ್ಲಿ ಶ್ರೇಷ್ಠವಾದದ್ದು ಎಂದು ಹೇಳುತ್ತಾ ಬರಲಾಗಿದೆ. ಆದರೆ ಈ ತಳಿಯಲ್ಲಿ ಕೆಲವು ಕಾರಣಗಳಿಂದ ಸಾಕಷ್ಟು ಪ್ರಮಾಣದಲ್ಲಿ ಹಣ್ಣುಗಳು ಕೊಳೆಯುವುದಿದೆ, ಕೈ ತಪ್ಪಿ ಹೋಗುತ್ತಿದೆ. ಹಣ್ಣಿನ ನೊಣ ವಿಪರೀತವಾಗಿ ಬಾಧೆ ಮಾಡುವುದಿದೆ. ಹಾಗೆಯೇ ಹಣ್ಣಿನ ತಿರುಳು ಸ್ಪಾಂಜಿ ಟಿಶ್ಯೂ ಎಂಬ ಸಮಸ್ಯೆಯಿಂದ ತಿನ್ನಲು ಹಿತವಾಗಿರುವುದಿಲ್ಲ. ಇತರೇ ತಳಿಗಳಲ್ಲೂ ಸಮಸ್ಯೆಗಳಿವೆ. ಹಣ್ಣಿನ ವಾಟೆ ಮೂತಿ ಹುಳು ನೀಲಂ ತಳಿಯನ್ನು ಸೇರಿಕೊಂಡು ಕೆಲವು ತಳಿಗಳಲ್ಲಿ ಕಾಣಿಸಿಕೊಳ್ಳುವುದಿದೆ. ಹಣ್ಣು ಮಾಗುತ್ತಿರುವಾಗಲೇ ಕೊಳೆತ ಶುರುವಾಗಿ ಕೈತಪ್ಪಿ ಹೋಗುವುದಿದೆ. ಆದರೆ ಮಲ್ಲಿಕಾ ಎಂಬ ತಳಿ ಮಲೆನಾಡು, ಅರೆ ಮಲೆನಾಡು ಮತ್ತು ಬಯಲು ಸೀಮೆಯ ಪ್ರದೇಶಗಳಲ್ಲಿ ಹಿತವಾಗಿ ಬೆಳೆಯುತ್ತಿದೆ. ಈ ತಳಿಯ ಹಣ್ಣುಗಳು ಇಷ್ಟವಾಗುವ ರೀತಿಯಲ್ಲಿ ಇರುತ್ತವೆ. ಹಣ್ಣಿನ ನೊಣದ ಬಾಧೆ, ಹಣ್ಣಿನ ಕೊಳೆತ, ಸಿಪ್ಪೆ ಬೇಗ ಹಾಳಾಗುವುದು-ಈ ರೀತಿಯ ಸಮಸ್ಯೆ ಮಲ್ಲಿಕಾ ತಳಿಯ ಮಾವಿನಲ್ಲಿ ಕಾಣುತ್ತಿಲ್ಲ. ದೊಡ್ಡ ಗಾತ್ರದ ಕಾಯಿಗಳು ಉದ್ದವಾಗಿರುತ್ತವೆ. ಕೆಲವೊಮ್ಮೆ ಒಂದೊಂದು ಕಾಯಿ ಅರ್ಧದಿಂದ ಮುಕ್ಕಾಲು ಕೆಜಿ ತೂಗುವುದಿದೆ. ಹಣ್ಣಿನ ಒಳಗಡೆ ತೆಳುವಾದ ವಾಟೆ, ನಾರಿನಂಶ ಇಲ್ಲವೇ ಇಲ್ಲ. ಹಣ್ಣುಗಳು ಬಾಳಿಕೆ ಬರುತ್ತವೆ. ಹಿತವಾದ ರುಚಿ, ಇಷ್ಟವಾಗುವ



ಸುವಾಸನೆ. ಎಷ್ಟು ತಿಂದರೂ ಇನ್ನೂ ತಿನ್ನಬೇಕೆನ್ನುವ ಆಸೆ ಹುಟ್ಟುತ್ತದೆ. ಮಲ್ಲಿಕಾ ಮಾವಿನ ಮರಗಳು ದೊಡ್ಡದಾಗಿ ಹರಡಿಕೊಂಡು ಬೆಳೆಯುವುದಿಲ್ಲ. ಕಿರಿದಾದ ಎಲೆಯುಳ್ಳ ಮರಗಳು ಒಂದು ರೀತಿಯಲ್ಲಿ ಕುಬ್ಜವಾಗಿ ಇರುತ್ತವೆ. ಕೀಟ ರೋಗಗಳ ಬಾಧೆಯು ಮರಕ್ಕೂ, ಕಾಯಿಗೂ, ಹಣ್ಣಿಗೂ ಕಡಿಮೆ. ಪ್ರತಿ ವರ್ಷವೂ ಮಲ್ಲಿಕಾ ಮಾವಿನ ಮರಗಳಲ್ಲಿ ಕಾಯಿಗಳನ್ನು ಕಾಣಬಹುದು. ಕಾಯಿಗಳು ಬೀಳುವುದು, ಹಣ್ಣುಗಳು ಕೆಡುವುದು ಈ ತಳಿಯಲ್ಲಿ ಬಹು ಕಮ್ಮಿ. ಆಪೂಸು ಅಥವಾ ಬಾದಾಮಿ ಮತ್ತು ದೆಸೆರಿ -ಈ ತಳಿಗಳ ಸಂಯೋಜನೆಯಿಂದ ಸೃಷ್ಟಿಯಾಗಿರುವ ತಳಿಯಿದು. ಹೆಚ್ಚು ಮಳೆ ಬೀಳುವ ಮಲೆನಾಡು ಭಾಗಗಳಲ್ಲೂ ಕೆಲವರು ಇದನ್ನು ಇಷ್ಟಪಟ್ಟು ಕಾಫಿ ತೋಟಗಳಲ್ಲಿ ಹಾಕಿಕೊಂಡಿದ್ದಾರೆ ಫಸಲನ್ನು ಪಡೆಯುತ್ತಿದ್ದಾರೆ.

(ಕೃಷಿ ತಜ್ಞರು ಮತ್ತು ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಹಾಸನ)

24-07-2023
V-karnataka Pg 01

24-07-2023
Viswavani add Pg 02

Great Indian Bustards may get a K'taka nest


Ballari's Siruguppa likely to become breeding centre

PAVAN KUMAR H
HUBBALLI, DHNS

If everything goes according to the forest department's plan, Siruguppa in Ballari district could soon become a breeding centre for the critically endangered Great Indian Bustards (GIBs).

The GIBs are one of the heaviest flying birds in the world. Studies say there are 135 GIBs in the wild in India, and a majority of them are in Rajasthan. According to reports, there are six GIBs in Karnataka.

According to a study by H N Kumara, principal scientist at the Salim Ali Centre for Ornithology and Natural History, Coimbatore, Siruguppa is considered to be one of the most promising sites for these grassland birds. It could house a 'source population' centre in three to four years.



The Great Indian Bustard.
(CREDIT: ARUN S K)

Not so long ago, Karnataka used to house a large number of GIBs in the wild. Ranebennur in Haveri was considered its favourite ground. But there has been hardly any sighting in the Ranebennur blackbuck sanctuary in the last decade or so after the forest department converted the grassland into a 'forest'.

If sources in the forest department are to be believed, Siruguppa has the second-highest population of GIBs in the wild.

▸ GIB, Page 5

K'taka may turn fertile ground for Great Indian Bustards

GIB, From Page 1

Kutch in Gujarat is believed to house four GIBs, Andhra Pradesh two and Maharashtra one.

Last week, a five-member committee consisting of forest officials and experts visited Rajasthan to understand the requirements to improve the habitat at Siruguppa. Dr Arun S K, wildlife warden of Ballari and part of the committee, said they understood the requirements for improving the habitat at Siruguppa.

"The team understood the kind of grasses to be cultivated in these protected areas to ensure the GIBs get sufficient feed and safe areas for breeding. Once the department gets sufficient land, the entire area will be fenced to minimise human or predator intervention," he said.

The forest department, is planning to purchase nearly 1,000 hectares of land directly from farmers under the compensatory afforestation (CA) scheme, where companies that have acquired forest land compensate with the same amount of land to the forest department for afforestation. Since 2016, the department has secured 135 ha of farmland, which is being preserved for GIB conservation.

Sutirtha Dutta, a scientist at the Wildlife Institute of India (WII) and an expert on GIB, says Karnataka doesn't have a large GIB population to secure a captive founder population from wild-laid eggs for conservation breeding. However, if habitats are restored to the tune of 300 sq km contiguous habitats of grasslands and seasonal agriculture with 10 sq km fenced enclosures where the birds can breed, then captive-bred birds from the national conservation breeding centre in Rajasthan can be released in Siruguppa, as per an agreement between the central and Rajasthan government, with approval from authorities concerned.

Ballari Deputy Conservator of Forest Sandeep Suryavanshi said the department is confident of getting the vast acres of land for GIB conservation without burdening the government through the CA scheme.

"In three-four years, Siruguppa could become a breeding centre if proper efforts are put in. The learning from Siruguppa can be put to use in other 12 districts of the state where GIBs were once found." The Karnataka Mining Environment Restoration Corporation (KMERC) has approved a special project for the conservation of GIBs at Siruguppa and released Rs 24 crore. The department will utilise these funds for improving the habitat in 24 villages where the birds are currently being sighted. The department is also creating awareness programmes for farmers and schoolchildren to conserve these birds, he said.

24-07-2023
Dec Hrd Pg 01